**4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ದೊಡ್ಡಬಳ್ಳಾಪುರ**
**ಬೆಂಗಳೂರು ಗ್ರಾಮಾಂತರ ಜಿಲ್ಲೆ, ಬೆಂಗಳೂರು**

**ಎಸ್.ಸಿ. ನಂಃ10004 /2024**

ಚಾಸಾ ಃ 24
ಪ್ರಾಸಾ ಃ 15

| | | |
|---|---|---|
| ಹೆಸರು | ಃ | ಪಾಂಡುರಂಗ.ಎಸ್ |
| ತಂದೆ ಹೆಸರು | ಃ | ಶಿವುಕುಮಾರ್ |
| ವಯಸ್ಸು | ಃ | 43 ವರ್ಷ |
| ವೃತ್ತಿ | ಃ | ಮುಖ್ಯ ಪೇದೆ, ದೊಡ್ಡಬಳ್ಳಾಪುರ ನಗರ ಪೊಲೀಸ್ ಠಾಣೆ, |
| ವಾಸ | ಃ | ದೊಡ್ಡಬಳ್ಳಾಪುರ. |

**ಈ ದಿನ ದಿನಾಂಕಃ 17-03-2025 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋದಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸರ್ಕಾರಿ ಅಭಿಯೋಜಕರವರಿಂದ ಃ**

2019 ರಿಂದ ನಾನು ದೊಡ್ಡಬಳ್ಳಾಪುರದ ನಗರ ಪೋಲಿಸ ಠಾಣೆಯಲ್ಲಿ ಮುಖ್ಯ ಪೇದೆಯಾಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ.

**2.** ದಿನಾಂಕ 13.04.2023 ರಂದು ಬೆಳಗಿನ ಹಾಜರಾತಿ ಸಮಯದಲ್ಲಿ ಠಾಣಾಧಿಕಾರಿಯಾದ ಚಾಸಾ-34 ರವರು ನನ್ನನ್ನು ಮತ್ತು ಚಾಸಾ-25 ಠಾಣಾ ಪಿ ಸಿ 799 ಸುನೀಲ್ ಬಾಸಗಿ ಅವರನ್ನು ಈ ಪ್ರಕರಣದ ಆರೋಪಿಯ ಪತ್ತೆಗಾಗಿ ನೇಮಿಸಿರುತ್ತಾರೆ. ಅದರಂತೆ ಅದೇ ದಿನ ನಾನು ಮತ್ತು ಚಾಸಾ-25 ರವರು ಆರೋಪಿಯ ಪತ್ತೆಗಾಗಿ ಠಾಣೆಯಿಂದ ಹೊರೆಟು ನಗರದ ತೆರಿನಬೀದಿ, ಖಾಸಬಾಗ, ರಂಗಪ್ಪ ಸರ್ಕಲ್ ಮತ್ತು ಶ್ರೀನಗರ ಕಡೆಗಳಲ್ಲಿ ಹೋಗಿ ಬಾತ್ಮೀದಾರರನ್ನು ಸಂಪರ್ಕಿಸಿ ನಮ್ಮೊಂದಿಗೆ ಇದ್ದ ಭಾವಚಿತ್ರವನ್ನು ತೋರಿಸಿ ಮಾಹಿತಿ ಪಡೆಯಲಾಗಿ ಸದರಿ ಆರೋಪಿಯು ದೊಡ್ಡಬಳ್ಳಾಪುರದ ರೈಲ್ವೇ ಸ್ಟೇಷನ್ ಬಳಿ ಇರುವುದಾಗಿ ಮಾಹಿತಿ ನೀಡಿದ್ದರ ಮೇರೆಗೆ ರೈಲ್ವೇ ಸ್ಟೇಷನ್ ಗೆ ಹೋಗಿ ಸ್ಟೇಷನಲ್ಲಿದ್ದ ಆರೋಪಿಯನ್ನು ಮಧ್ಯಾಹ್ನ 3-00 ಗಂಟೆಗೆ ವಶಕ್ಕೆ

ಪಡೆದುಕೊಂಡು ಅದೇ ದಿನ ಮಧ್ಯಾಹ್ನ 3-30 ಗಂಟೆಗೆ ತನಿಖಾಧಿಕಾರಿಯಾದ ಚಾಸಾ-34 ರವರ ಮುಂದೆ ಹಾಜರುಪಡಿಸಿ ವರದಿ ಸಲ್ಲಿಸಿರುತ್ತೇನೆ. ನಾನು ಸಲ್ಲಿಸಿದ ವರದಿಯನ್ನು ಈಗ ನೋಡುತ್ತಿದ್ದು ಅದನ್ನು ನಿಪಿ-37 ಎಂದು ಗುರುತಿಸಲಾಯಿತು. ಅದರಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತೇನೆ. ಸದರಿ ಸಾಕ್ಷಿದಾರರು ತಮ್ಮ ಸಹಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಪಿ-37(ಎ) ಎಂದು ಗುರುತಿಸಲಾಯಿತು. ವಶಕ್ಕೆ ಪಡೆದುಕೊಂಡು ಹಾಜರುಪಡಿಸಿದ ಆರೋಪಿಯನ್ನು ಇಂದು ನ್ಯಾಯಾಲಯದಲ್ಲಿ ನೋಡಿ ಗುರುತಿಸುತ್ತೇನೆ. ಸದರಿ ಆರೋಪಿಯನ್ನು ನ್ಯಾಯಾಂಗ ಬಂಧನದಿಂದ ವಿ ಸಿ ಮೂಲಕ ನ್ಯಾಯಾಲಯಕ್ಕೆ ಹಾಜರುಪಡಿಸಿದ್ದು ಸದರಿ ಸಾಕ್ಷಿದಾರರು ಆರೋಪಿಯನ್ನು ವಿ ಸಿ ಯಲ್ಲಿ ನೋಡಿ ಗುರುತಿಸಿರುತ್ತಾರೆ.

**ಪಾಟೀ ಸವಾಲು: ಆರೋಪಿ ಪರ ವಕೀಲರಿಂದ:**

3. ದಿನಾಂಕ 11.04.2023, 12.04.2023 ಮತ್ತು 13.04.2023 ರಂದು ನನ್ನ ಕರ್ತವ್ಯದ ಅವಧಿಯು ಬೆಳಗ್ಗೆ 9-00 ಗಂಟೆಯಿಂದ ರಾತ್ರಿ 8-9 ಗಂಟೆ ಯವರೆಗೆ ಇತ್ತು. ಕರ್ತವ್ಯ ಮುಗಿದ ನಂತರ ರಾತ್ರಿ ಮನೆಗೆ ಹೋಗುತ್ತಿದ್ದೇನು. ಮೇಲೆ ಹೇಳಿದ 3 ದಿನಾಂಕದಂದು ನನ್ನನ್ನು ಕರ್ತವ್ಯಕ್ಕೆ ನೇಮಿಸಿದ ಬಗ್ಗ ಠಾಣಾ ದಿನಚರಿಯಲ್ಲಿ ದಾಖಲಿಸಿರುತ್ತಾರೆಂದರೆ ಸರಿ. ದಿನಾಂಕ 12.04.2023 ರಂದು ಯಾವುದೇ ಪ್ರಕರಣಕ್ಕೆ ಸಂಬಂಧಪಟ್ಟಂತೆ ಆರೋಪಿತರನ್ನು ದಸ್ತಗಿರಿ ಪಡೆಸಲು ನಮ್ಮ ಮೇಲಾಧಿಕಾರಿಗಳಿಂದ ಯಾವುದೇ ಆದೇಶ ಇರಲಿಲ್ಲ. ದಿನಾಂಕ 12.04.2023 ರಂದು ನಮ್ಮ ಠಾಣೆಯಲ್ಲಿ ಮುನಿರಾಜು, ಇನ್ಸ್ ಪೆಕ್ಟರ್ ಪ್ರೀತಂ, ಕ್ರೈಮ್ ಟೀಂ ನ ಸುನೀಲ್ ಬಾಸಗಿ, ಹುಸೇನ್ ಸಾಬ್, ರೈಟರ್ ನಾಗರಾಜ್ ಮತ್ತು ಬೇರೆಯವರೂ ಸಹ ಇದ್ದರು. ಇಲಾಖಾ ಸಿಬ್ಬಂದಿಗಳಲ್ಲದೆ ಬೇರೆ ಯಾರಾದರೂ ಸಾರ್ವಜನಿಕರು ಇದ್ದರೇ ಎಂದರೆ ಸಾಮಾನ್ಯವಾಗಿ ಬಂದು ಹೋಗುತ್ತಿರುತ್ತಾರೆ. ಬಂದು ಹೋಗುವ ಸಾರ್ವಜನಿಕರಲ್ಲದೆ ಬೇರೆ ಯಾರಾದರನ್ನು ಠಾಣೆಯಲ್ಲಿ ಕೂರಿಸಿದ್ದರೇ ಎಂಬುದನ್ನು ನಾನು ಪರಿಶೀಲಿಸಿರುವುದಿಲ್ಲ.

4. ಸಾಮಾನ್ಯವಾಗಿ ಯಾವುದೇ ವ್ಯಕ್ತಿಯನ್ನು ಠಾಣೆಯಲ್ಲಿ ಬಲವಂತಾಗಿ ಕೂರಿಸಿದ್ದಲ್ಲಿ ನಮ್ಮ ಗಮನಕ್ಕೆ ಬರುತ್ತದೆಂದರೆ ಠಾಣೆಯಲ್ಲಿದಾಗ ವಿಚಾರಿಸುತ್ತೇವೆ. ದಿನಾಂಕ 12.04.2023 ರಂದು ನಮ್ಮ ಠಾಣೆಯಲ್ಲಿ ಬೆಳಗ್ಗೆಯಿಂದ ರಾತ್ರಿಯವರೆಗೆ ಯಾವುದೇ ವ್ಯಕ್ತಿಯನ್ನು ಕೂರಿಸಿರುವುದಿಲ್ಲ. ನಾನು ಅಪರಾಧದ ವಿಭಾಗದಲ್ಲಿ ಇರುವುದರಿಂದ ದಿನಾಂಕ 12.04.2023 ರಂದು ಯಾವುದೇ ಪ್ರಕರಣದ ಬಗ್ಗೆ ಮಾಹಿತಿ ಇರಲಿಲ್ಲ. ದೊಡ್ಡಬಳ್ಳಾಪುರ ನಗರದಲ್ಲಿ ಯಾವುದೇ ಘೋರ ಪ್ರಕರಣ ನಡೆದಿದ್ದಲ್ಲಿ ನಮ್ಮ ಗಮನಕ್ಕೆ ಬರುತ್ತದೆ ಎಂದರೆ ಸರಿ. ದಿನಾಂಕ 12.04.2023 ರಂದು ದೊಡ್ಡಬಳ್ಳಾಪುರದಲ್ಲಿ ಯಾವುದೇ ಘೋರ ಪ್ರಕರಣ ನಡೆದಿರುವುದಿಲ್ಲವೆಂದರೆ ಸರಿ. ಸದರಿ ಸಾಕ್ಷಿದಾರರು ಸ್ವತಃ ಮುಂದುವರೆದು ದಿನಾಂಕ 11.04.2023 ರಂದು ಶ್ರೀನಗರದಲ್ಲಿ ಕೊಲೆ ನಡೆದಿರುತ್ತದೆ ಎಂದು ಗೊತ್ತಾಗಿರುತ್ತದೆ ಎಂದು ತಿಳಿಸಿರುತ್ತಾರೆ . ದಿನಾಂಕ 11.04.2023 ರಂದು ಘಟನೆ ನಡೆದಿರುತ್ತದೆಂಬ ವಿಚಾರ ಅದೇ ದಿನ ರಾತ್ರಿ ಗೊತ್ತಾಗಿರುತ್ತದೆ ಆದರೆ ನಿಖರವಾಗಿ ಸಮಯ ಹೇಳಲು ಬರುವುದಿಲ್ಲ. ಸದರಿ ವಿಚಾರವನ್ನು ನಮ್ಮ ಅಪರಾಧ ವಿಭಾಗದವರು ತಿಳಿಸಿರುತ್ತಾರೆ. ಆಗ ನಾನು ಮನೆಯಲ್ಲಿ ಇದ್ದೇನು, ಅಂದರೆ ನನಗೆ ಪೋನ್ ಮಾಡಿ ತಿಳಿಸಿರುತ್ತಾರೆ. ಗೊತ್ತಾದರೂ ನಂತರ ನನಗೆ ಬರಲು ಹೇಳದೆ ಇದುದ್ದರಿಂದ ಮನೆಯಲ್ಲಿಯೇ ಇದ್ದೇನು. ಈ ಘಟನೆಯ ಬಗ್ಗೆ ಗೊತ್ತಾದ ನಂತರ ನಾನು ಏನೂ ಮಾಡಿರುವುದಿಲ್ಲ. ದಿನಾಂಕ 12.04.2023 ರಂದು ಮೇಲಾಧಿಕಾರಿಗಳು ನನಗೆ ಯಾವುದೇ ಸೂಚನೆ / ಮಾಹಿತಿ / ಆದೇಶ ನೀಡಿರುವುದಿಲ್ಲ ವೆಂದರೆ ಸರಿ. ದಿನಾಂಕ 12.04.2023 ರಂದು ನನಗೆ ಯಾವುದೇ ವಿಶೇಷ ಕರ್ತವ್ಯಕ್ಕೆ ನೇಮಿಸಿರುವುದಿಲ್ಲ ಠಾಣೆಯಲ್ಲಿಯೇ ಕರ್ತವ್ಯದಲ್ಲಿ ಇದ್ದೇನು.

5. ಆರೋಪಿಯನ್ನು ವಶಕ್ಕೆ ಪಡೆದ ಸಮಯದಲ್ಲಿ ಆರೋಪಿಯು ಯಾವ ರೀತಿಯ ಬಟ್ಟೆ ಧರಿಸಿದ್ದನೆಂದು ಈಗ ನೆನಪು ಇರುವುದಿಲ್ಲ. ಸದರಿ ಆರೋಪಿಯನ್ನು ವಶಕ್ಕೆ ಪಡೆದುಕೊಳ್ಳುವ ಸಮಯದಲ್ಲಿ ಆತನ ಹೆಸರು ವಿಳಾಸ ವಿಚಾರಿಸಲಾಗಿ ತಾನು ಸ್ಯಾಮ್ ಮರಿಯಾದಾಸ್ ಎಂದು ತಿಳಿಸಿದ್ದರಿಂದ ವಶಕ್ಕೆ ಪಡೆದುಕೊಂಡಿರುತ್ತೇವೆ. ನಮ್ಮಲ್ಲಿದ್ದ ಪೋಟೋದಲ್ಲಿ ಆರೋಪಿಯು ಯಾವ ರೀತಿಯ ಬಟ್ಟೆ ಧರಿಸಿದ್ದನೆಂದು ನೆನಪು ಇರುವುದಿಲ್ಲ. ಮೊಬೈಲ್ ನಲ್ಲಿ ಪೋಟೋ ಕೊಟ್ಟಿದರು ಅದು ಒಬ್ಬನದೇ ಆಗಿತ್ತು. ಆರೋಪಿಯನ್ನು ವಶಕ್ಕೆ ಪಡೆದುಕೊಂಡ ಸಮಯದಲ್ಲಿ ಆರೋಪಿ ದೈಹಿಕವಾಗಿ ಚನ್ನಾಗಿ

ಇದ್ದನು. ಅವನಿಗೆ ಯಾವುದೇ ತರಹದ ಗಾಯಗಳಾಗಿರುವುದನ್ನು ಪರಿಶೀಲಿಸಿರುವುದಿಲ್ಲ. ಸಾಮಾನ್ಯವಾಗಿ ಯಾವುದೇ ದೊಡ್ಡಗಾಯಾವಾಗಿ ಬ್ಯಾಂಡೇಜ್ ಹಾಕಿದಲ್ಲಿ ಕಾಣುತ್ತದೆ ಎಂದರೆ ಸರಿ. 2023 ರಲ್ಲಿ ನಮ್ಮ ಠಾಣೆಯಲ್ಲಿ ಸಿ ಸಿ ಟಿವಿ ವ್ಯವಸ್ಥೆ ಇತ್ತು. ದಿನಾಂಕ 13.04.2023 ರಂದು ನಾನು ಆರೋಪಿಯನ್ನು ದೊಡ್ಡಬಳ್ಳಾಪುರದ ರೈಲ್ವೇ ಸ್ಟೇಷನ್ ನಲ್ಲಿ ಆರೋಪಿಯನ್ನು ವಶಕ್ಕೆ ಪಡೆದುಕೊಂಡಿರುವುದಿಲ್ಲವೆಂದರೆ ಸರಿಯಲ್ಲ. ಆ ದಿನ ನಾವು ಮೇಲೆ ಹೇಳಿದ ಯಾವುದೇ ಸ್ಥಳಕ್ಕೆ ಆರೋಪಿಯ ಪತ್ತೆಗಾಗಿ ಹೋಗಿರುವುದಿಲ್ಲ ಮತ್ತು ಬಾತ್ಮೀದಾರರಿಂದ ಯಾವುದೇ ಮಾಹಿತಿಯನ್ನು ಪಡೆದುಕೊಂಡಿರುವುದಿಲ್ಲ ಎಂದರೆ ಸರಿಯಲ್ಲ.

6. ದಿನಾಂಕ 12.04.2023 ರಂದು ಮುಂಜಾನೆಯೇ ಆರೋಪಿಯನ್ನು ದೊಡ್ಡಬಳ್ಳಾಪುರದ ಬಾಶೆಟ್ಟಿಹಳ್ಳಿಯ ಮಣಿಪಾಲ್ ಆಸ್ಪತ್ರೆಯಿಂದ ನಮ್ಮ ಠಾಣೆಗೆ ಕರೆದುಕೊಂಡು ಠಾಣೆಯಲ್ಲಿಯೇ ಬಲವಂತಾಗಿ ಕೂರಿಸಿದ್ದೇವು ಎಂದರೆ ಸರಿಯಲ್ಲ. ನಾನು ಸುಳ್ಳು ವರದಿಯನ್ನು ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ.

**ಮರು ವಿಚಾರಣೆ ಇರುವುದಿಲ್ಲ.**

**(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು.)**

ಓ ಹೇ ಕೇ ಸರಿ ಇದೆ

4 ನೇ ಅಪರ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ದೊಡ್ಡಬಳ್ಳಾಪುರ